# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ–35 ಅರಮನೆನಗರ, 17ನೇ ಅಡ್ಡರಸ್ತೆ, ಸದಾಶಿವನಗರ, ರಾಮಕೃಷ್ಣ ಹೆಗಡೆ ಸಂಕೀರ್ಣ,
ಮೊದಲನೆ ಮಹಡಿ, ಸದಾಶಿವನಗರ,ಬೆಂಗಳೂರು

ಸಂಖ್ಯೆ: ಸ.ಅ(ಅರಮನೆನಗರೆ)/ವಾರ್ಡ–35/ವಾ.ಕ/ಪಿಆರ್/09/21–22 ದಿನಾಂಕ: 22/12/2021

**ದಿನಾಂಕ: 20/12/2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

9. ವಾರ್ಡ್ ಸಮಿತಿ ಸದಸ್ಯರು.
10. ಹಿರಿಯ ಆರೋಗ್ಯ ಪರಿವೀಕ್ಷಕರು
11. ಕಿರಿಯ ಆರೋಗ್ಯ ಪರಿವೀಕ್ಷಕರು
12. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮತ್ತಿಕೆರೆ ಉಪ–ವಿಭಾಗ ಬಿಬಿಎಂಪಿ
13. ಬೆಸ್ಕಾಂ ಅಧಿಕಾರಿಗಳು ಸದಾಶಿವನಗರ
14. ಬಿಡ್ಬ್ಯೂಎಸ್ಎಸ್‌ಬಿ ಅಧಿಕಾರಿಗಳು ಮತ್ತಿಕೆರೆ
15. ಕಂದಾಯ ಅಧಿಕಾರಿಗಳು ಸದಾಶಿವನಗರ

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಯಾದ ಶ್ರೀಮತಿ ಹರ್ಷಾ ನಾಯಕ್ ರವರು ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀ ಓಂ ಪ್ರಕಾಶ್, ವಾರ್ಡ ನೊಡಲ್ ಅಧಿಕಾರಿ, ಸಮಿತಿ ಸದಸ್ಯರನ್ನು ಹಾಗೂ ಅಧಿಕಾರಿ/ಸಿಬ್ಬಂದಿಗಳನ್ನು ಸ್ವಾಗತಿಸುತ್ತಾ, ಈ ಹಿಂದಿನ ವಾರ್ಡ್ ಸಮಿತಿ ಸಭೆಯ ನಡವಳಿಯನ್ನು ಎಲ್ಲರ ಸಮ್ಮುಖದಲ್ಲಿ ಓದಗಾಗಿ, ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸಲಾಯಿತು.

ಮತ್ತು ಸಭೆಗೆ ನಿತ್ಯವೂ ಪಾಲಿಕೆಯ ಇಲೆಟ್ರಿಕಲ್ ಅಧಿಕಾರಿಗಳು, ಪಾರೆಸ್ಟ್ ಅಧಿಕಾರಿಗಳು ಮತ್ತು ಬಿಡ್ಬ್ಯೂಎಸ್ಎಸ್‌ಬಿ ಗೈರು ಹಾಜರಾಗುತ್ತಿದ್ದು, ಈ ಬಗ್ಗೆ ಸದರಿ ಅಧಿಕಾರಿಗಳಿಗೆ ಇನ್ನೊಂದು ಅವಕಾಶವನ್ನು ನೀಡಿ, ತಪ್ಪಿದರೆ ಸದರಿ ಇಲಾಖೆಯ ಮುಖ್ಯಸ್ಥರಿಗೆ ಗಮನಕ್ಕೆ ತಂದು ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದು ಎಂದು ನೋಡೆಲ್ ಅಧಿಕಾರಿಯವರು ತಿಳಿಸಿರುತ್ತಾರೆ.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

- ಸದಾಶಿವನಗರದ ವ್ಯಾಪ್ತಿಯಲ್ಲಿ ಹಲವಾರು ವಾಣಿಜ್ಯ ಕಟ್ಟಡಗಳು ವ್ಯವಹರಿಸುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ.–**ಈ ಬಗ್ಗೆ ಹಿರಿಯ ಆರೋಗ್ಯ ಅಧಿಕಾರಿ, ಬಿಬಿಎಂಪಿ ರವರು ಕ್ರಮ ಕೈಗೊಳ್ಳುವುದು.**
- ಸದಾಶಿವನಗರದ ವ್ಯಾಪ್ತಿಯಲ್ಲಿ ಸ್ಕೋಡಾ ಶೋ ರೂಂ ರವರು ರಸ್ತೆಯಲ್ಲಿ ಹಲವಾರು ಕಾರ್‌ಗಳನ್ನು ನಿಲ್ಲಿಸುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ .–**ಈ ಬಗ್ಗೆ ಸದಾಶಿವನಗರ ಟ್ರಾಫಿಕ್ ರವರು ಕ್ರಮ ಕೈಗೊಳ್ಳುವುದು.**
- ಸದಾಶಿವನಗರದ ವ್ಯಾಪ್ತಿಯಲ್ಲಿನ ಪೂರ್ಣ ಪ್ರಜ್ಞಾ ಶಾಲೆ ಹತ್ತಿರ ಡೆಬ್ರಿಸ್ ಇರುವ ಬಗ್ಗೆ ತಿಳಿಸಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ – **ಈ ಬಗ್ಗೆ ಸದಾಶಿವನಗರದ ಬೆಸ್ಕಾಂ ಅಧಿಕಾರಿಗಳು ರವರು ಕ್ರಮ ಕೈಗೊಳ್ಳುವುದು.**
- ಎಂಎಸ್ಆರ್ ನಗರದಲ್ಲಿ ಹಲವಾರು ವಿದ್ಯುತ್ ಕಂಬಗಳು ದುಸ್ಥಿತಿಯಲ್ಲಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ– **ಈ ಬಗ್ಗೆ ಮತ್ತಿಕೆರೆ ಬೆಸ್ಕಾಂ ಅಧಿಕಾರಿಗಳು ರವರು ಕ್ರಮ ಕೈಗೊಳ್ಳುವುದು.**
- ಎಂಎಸ್ಆರ್ ನಗರದ 1ನೇ ಮತ್ತು 2ನೇ ಅಡ್ಡರಸ್ತೆಯಲ್ಲಿರುವ 6ನೇ ಅಡ್ಡರಸ್ತೆಯ ಬೃಹದಾಕಾರದ ಮರವಿದ್ದು, ಅದರ ರಂಬೆಗಳನ್ನು ಕತ್ತರಿಸಲು ತಿಳಿಸಲಾಯಿತು– **ಈ ಬಗ್ಗೆ ಬಿಬಿಎಂಪಿ ಅರಣ್ಯ ಇಲಾಖೆಯ ಅಧಿಕಾರಿಗಳು ರವರು ಕ್ರಮ ಕೈಗೊಳ್ಳುವುದು.**
- 6ನೇ ಮುಖ್ಯರಸ್ತೆಯಲ್ಲಿ ಹಲವಾರು ಬೇಕರಿಗಳಿದ್ದು, ರಾತ್ರಿ 2 ಘಂಟೆಯ ವರೆಗೆ ತೆರೆದಿದ್ದು, ಯುವಕರು ರಾತ್ರಿಯಲ್ಲಿ ಗಲಾಟೆ ಮಾಡುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ– **ಈ ಬಗ್ಗೆ ಬಿಬಿಎಂಪಿಯ ಹಿರಿಯ ಆರೋಗ್ಯ ಅಧಿಕಾರಿಗಳು ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಟ್ರಾಫಿಕ್‌ರವರು ಕ್ರಮ ಕೈಗೊಳ್ಳುವುದು.**

ಮು.ತಿ.ನೋ

- ನ್ಯೂ ಬಿಇಎಲ್ ರಸ್ತೆಯಲ್ಲಿ ರಸ್ತೆ ಬದಿ ದೀಪ ರಾತ್ರಿಯಲ್ಲಿ ಊರಿಯುತ್ತಿಲದಿರುವ ಬಗ್ಗೆ ತಿಳಿಸಿದ್ದು—**ಈ ಬ** **ಬಿಬಿಎಂಪಿ ಇಲೆಟ್ರಿಕಲ್‌ರವರು ಅಗತ್ಯ ಕ್ರಮ ಕೈಗೊಳ್ಳುವುದು.**
- ಎಜಿಎಸ್ ಬಡಾವಣೆಯಲ್ಲಿನ ಟ್ರಾನ್ಸ್‌ಫಾರಂ ಮೇಲೆ ಮಾವಿನ ಮರದ ರೆಂಬೆಯಿಂದ ಅಳಿಲು ಎಗರಿದಾಗಲ್ಲೆಲ್ಲ ಪಕ್ಕದ ಮನೆಯ ನಿವಾಸಿಯ ಇಲೆಟ್ರಿಕಲ್ ವಸ್ತುಗಳು short circuit ಆಗಿದ್ದು ಸುಟ್ಟು ಹೋಗಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ–**ಈ ಬಗ್ಗೆ ಮತ್ತಿಕೆರೆಯ ಬೆಸ್ಕಾಂ ಅಧಿಕಾರಿಗಳು ರವರು ಕ್ರಮ ಕೈಗೊಳ್ಳುವುದು.**
- ಬಳ್ಳಾರಿ ರಸ್ತೆಯ Air Force training HQ ಬದಿಯಲ್ಲಿನ ಒಳಚರಂಡಿ ನೀರು ರಸ್ತೆಯ ಮೇಲ್ಲೈ ಹರಿದು ಹೋಗುತ್ತಿದು, ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ. **ಈ ಬಗ್ಗೆ ಮತ್ತಿಕೆರೆಯ ಬಿಡ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳು ರವರು ಕ್ರಮ ಕೈಗೊಳ್ಳುವುದು.**
- ಚಿಕ್ಕಮಾರನಹಳ್ಳಿಯ ಬಸ್ ನಿಲ್ದಾಣದ ಒಳಾಂಗಣದಲ್ಲಿ ವಿದ್ಯುತ್ ದೀಪಗಳು ಊರಿಯದ ಕಾರಣ ರಾತ್ರಿಯಲ್ಲಿ ಮಹಿಳೆಯರು ಹಾಗೂ ಮಕ್ಕಳಿಗೆ ಅನಾನುಕೂಲವಾಗುತ್ತಿದ್ದು ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ **–ಈ ಬಗ್ಗೆ ಬಿ.ಎಂ.ಟಿ.ಸಿ ಅಧಿಕಾರಿಗಳು ಕ್ರಮ ಕೈಗೊಳ್ಳುವುದು.**
- ಅಶ್ವಥ್‌ನಗರದ ಅಂಬೂರು ಬಿರಿಯಾನಿ ಹೋಟೆಲ್ ರವರು ಒಳಚರಂಡಿಯ ನೀರನ್ನು ಪಾದಚಾರಿ ಮಾರ್ಗದ ಮೇಲೆ ಬಿಡುತ್ತಿದ್ದು, ಸಾರ್ವಜನಿಕರಿಗೆ ಅನಾನುಕೂಲವಾಗಿರುವ ಕಾರಣ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತಾರೆ **–ಈ ಬಗ್ಗೆ ಬಿಬಿಎಂಪಿ ಹಿರಿಯ ಆರೋಗ್ಯ ಅಧಿಕಾರಿಗಳು ಲೈಸನ್ಸ್ ರದ್ದೀಕರಿಸುವುದು, ಬಿಡ್ಲ್ಯೂಎಸ್‌ಎಸ್‌ಬಿ ರವರು ಸ್ಯಾನಿಟರಿ ನೀರು ಪಾದಚಾರಿ ಮಾರ್ಗದ ಮೇಲೆ ಹರಿಯದಂತೆ ಅಗತ್ಯ ಕ್ರಮ ಕೈಗೊಳ್ಳುವುದು.**

ಸಾರ್ವಜನಿಕ ಹಿತದೃಷ್ಟಿಯಿಂದ ಅಧಿಕಾರಿಗಳು ಕಾರ್ಯೋನ್ಮುಖವಾಗಿ ಕೆಲಸ ನಿರ್ವಹಿಸಲು ತಿಳಿಸುತ್ತಾ, ಚರ್ಚಿಸಲಾಗಿರುವಂತಹ ವಿಷಯಗಳ ತ್ವರಿತ ಗತಿಯಲ್ಲಿ ನಿರ್ವಹಿಸಲು ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡೆಲ್ ಅಧಿಕಾರಿಯವರ ಅನುಮೋದನೆ ಮೇರೆಗೆ]**

**ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್–35 ಅರಮನೆನಗರ**

**ಪ್ರತಿಯನ್ನು:**

12. ಪೂಜ್ಯ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
13. ಪೂಜ್ಯ ಉಪ ಮಹಾಪೌರರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
14. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
15. ಕಾರ್ಯದರ್ಶಿಗಳು ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
16. ವಾರ್ಡ್ ಸಮಿತಿ ಸದಸ್ಯರು ಬಿಬಿಎಂಪಿ ರವರ ಅವಗಾಹನೆಗಾಗಿ ಮಂಡಿಸಿದೆ.
17. ಮಾನ್ಯ ಜಂಟಿ/ಉಪ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
18. ಮಾನ್ಯ ಕಂದಾಯ ಅಧಿಕಾರಿ(ಮಲ್ಲೇಶ್ವರಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
19. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ತೋಟಗಾರಿಕೆ/ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಅವಗಾಹನೆಗಾಗಿ ಮಂಡಿಸಿದೆ.
20. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಮತ್ತಿಕೆರೆ) ಉಪ ವಿಭಾಗ ರವರ ಅವಗಾಹನೆಗಾಗಿ ಮಂಡಿಸಿದೆ.
21. ಸಹಾಯಕ ಕಂದಾಯ ಅಧಿಕಾರಿ(ಕಲ್ಯಾಣ–ಪಶ್ಚಿಮ) ರವರ ಅವಗಾಹನೆಗಾಗಿ ಮಂಡಿಸಿದೆ.
22. ಕಛೇರಿ ಕಡತಕ್ಕೆ.

ಮ.ತಿ.ನೋ